ಉಂಟು ಫಕೀರಿಚ್ಚ. ನಿಮ್ಮಿಂದಾಗಿ ನಮಗೆ ದಿನಾ ತಿನ್ನುವ ಅನ್ನ ಗಂಟಲೊಳಗೆ ಇಳಿವ ಹಾಗೆ ಆಯ್ತು. ಅವಳೂ ಇಲ್ಲಿ ನಮ್ಮ ಮನೆಗಿಂತ ಸುಖದಲ್ಲಿದ್ದಾಳೆ" ಅನ್ನುತ್ತ ಹೆಗಲ ಶಾಲಿನಿಂದ ಕಣ್ಣೊರೆಸಿಕೊಂಡ. ಫಕೀರಿಚ್ಚ ಶಿವಯ್ಯನ ಹೆಗಲು ತಟ್ಟಿ, ಗ್ಲಾಸಿನ ತಳದಲ್ಲಿ ನೊರೆಯೊಂದಿಗೆ ಉಳಿದಿರಬಹುದಾಗಿದ್ದ ಹಣ್ಣಿನ ರಸದ ಕೊನೆಯ ಹನಿಗಳನ್ನು ಸುರ್ರನೆ ಸಶಬ್ದವಾಗಿ ಸ್ಟ್ರಾದಿಂದ ಹೀರಿಕೊಂಡು ಮೇಲೆದ್ದ. ಪಕ್ಕನೆ ಯಾರೋ ಪರಿಚಿತರನ್ನು ಕಂಡಂತಾಗಿ ಅವನ ಕಣ್ಣು ತನಗಿಂತ ಎರಡು ಸಾಲು ಮುಂದೆ ಕುಳಿತು ಐಸ್ ಕ್ರೀಂ ಸವಿಯುತ್ತಿದ್ದವರ ಮೇಲೆ ನೆಟ್ಟಿತು. ಹೌದು. ಇಬ್ಬರೂ ಗುರುತಿನವರೇ. ಹುಡುಗಿ ಸುರೇಶನ ಮಗಳು. ಹುಡುಗ ಮರದ ಮಿಲ್ಲಿನ ಮೊಯ್ದಿನ್ಬಾವಾನ ಮಗ. ಮಂಗಳೂರಿನಲ್ಲಿ ಹೊಸದಾಗಿ ಹಾಕಿದ ಫರ್ನಿಚರ್ ಅಂಗಡಿಯ ಮೇಲುಸ್ತುವಾರಿ ಕೆಲಸವನ್ನು ಮೊಯ್ದಿನ್ಬಾವ, ಹತ್ತನೆ ತರಗತಿ ಮುಗಿಸಿ ಒಂದು ವರ್ಷ ಕಂಪ್ಯೂಟರ್ ಕೋರ್ಸ್ ಮಾಡಿ ಟ್ರಾನ್ಸ್‌ಪೋರ್ಟ್ ಆಫೀಸಲ್ಲಿ ಕೆಲಸಕ್ಕೆ ಸೇರಿಕೊಳ್ಳುವ ತಯಾರಿ ನಡೆಸುತ್ತಿದ್ದ ಸಣ್ಣ ಮಗನಿಗೆ ವಹಿಸಿದ್ದ. ದುಡ್ಡು ಕೊಟ್ಟು ಹೊರಬಂದರೂ ಫಕೀರಿಚ್ಚನ ತಲೆಯೊಳಗೆ ಆ ಮಕ್ಕಳೇ ತುಂಬಿದ್ದರು. ಅವರಿಬ್ಬರನ್ನೂ ಒಟ್ಟಿಗೆ ನೋಡುತ್ತಿರುವುದು ಇದು ಮೂರನೆಯ ಬಾರಿ. ಆ ಹುಡುಗನ ಅಂಗಡಿ ಇರುವುದು ನಗರದ ಒಂದು ಮೂಲೆಯಲ್ಲಾದರೆ ಇವಳ ಕಾಲೇಜು ಇನ್ನೊಂದು ಮೂಲೆಯಲ್ಲಿ. ಹಿಂದೆ ಎರಡು ಸಾರಿ ಇಬ್ಬರನ್ನೂ ಜೊತೆಯಾಗಿಯೇ ಕಂಡಿದ್ದರೂ ಅಷ್ಟೊಂದು ತಲೆ ಕೆಡಿಸಿಕೊಂಡಿರಲಿಲ್ಲ ಫಕೀರಿಚ್ಚ. ಆದರೆ, ಈಗ ಮಕ್ಕಳ ಪೋಕು ನೋಡಿದ್ರೆ ಇದು ಬೇರೆ ದಾರಿಯಲ್ಲುಂಟು ಅನಿಸಿತು. ಈಗಂತು ಹಿಂದೂ–ಮುಸ್ಲಿಮ್ ಹುಡುಗ ಹುಡುಗಿ ಮಾತಾಡಿದ್ರೇ ದೊಣ್ಣೆ ಹಿಡಿದು ಬರ್ತಾರೆ ಎರಡೂ ಕಡೆಯ ಸೈತಾನಿಗಳು. ಅಂತಾದ್ರಲ್ಲಿ ಈ ಮಕ್ಕಳನ್ನು ಹೀಗೆ ನೋಡಿದ್ರೆ ಬಿಡ್ತಾರಾ! ಅನಾಹುತ ಆಗುವ ಮುಂಚೆ ಏನಾದ್ರೂ ಒಂದು ದಾರಿ ಹುಡುಕಬೇಕು. ಹಾಗಂತ ಸೀದಾ ಹೋಗಿ ಅವರನ್ನೇ ಕೇಳುವ ಹಾಗಿಲ್ಲ. ಅವರ ಮನೆ ಮಂದಿಯ ಬಳಿಯೂ ಹೇಳುವ ಹಾಗಿಲ್ಲ. ಸುರೇಶನ ಹೆಸರಂತೂ ಈಗೀಗ ಧಾರ್ಮಿಕ ಸಂಘಟನೆಯೊಳಗೆ ಜಾಸ್ತಿ ಕೇಳಿ ಬರುತ್ತಿತ್ತು. ಆತನ ಕಿವಿಗೆ ಏನಾದರೂ ಪಿಸಪಿಸ ಬೀಳುವ ಮೊದಲು ಮಕ್ಕಳೊಡನೆ ಮಾತಾಡಬೇಕು. ಆಗ ಅವನಿಗೆ ನೆನಪಾಗಿದ್ದು ಯುನಿಟಿ ನರ್ಸಿಂಗ್ ಹೋಮಿನ ಡಾಕ್ಟರ್ ಗಿರಿಜಾ ಮೆನನ್. ಫಕೀರಿಚ್ಚ ಹೆಂಡತಿ ಮಕ್ಕಳ ಅಸೌಖ್ಯಗಳಿಗೆಲ್ಲ ಮದ್ದಿಗೆ ಹೋಗುವುದು ಆಕೆಯ ಹತ್ತಿರಕ್ಕೆ. ಆಕೆ ಮದುವೆಯಾಗಿದ್ದು ನೀಲೇಶ್ವರದ ಡಾ. ಅಬ್ಬಾಸರನ್ನು. ಹದಿನೈದು ವರ್ಷದಿಂದ ಆ ದಂಪತಿ ಅವರ ಕಣ್ಣೆದುರೇ ಬದುಕು ನಡೆಸುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಏನು ಮಾಡಿದರೊಳ್ಳೆಯದು ಅಂತ ಅವರ ಹತ್ತಿರ ಒಮ್ಮೆ ಕೇಳಬೇಕು ಅಂದುಕೊಂಡ. ತಲೆ ಪೂರ್ತಿ ಅದೇ ಯೋಚನೆಯೇ ಇದ್ದಿದ್ದರಿಂದ ಶಿವಯ್ಯ ಹೇಳಿದಕ್ಕೆಲ್ಲ ಸುಮ್ಮನೆ ಹಾಂ ಹಾಂ ಅನ್ನುತ್ತ ಹೆಜ್ಜೆ ಹಾಕುತ್ತಿದ್ದ ಫಕೀರಿಚ್ಚ. ಮಧ್ಯಾಹ್ನವಾದ್ದರಿಂದ

**'ಇಬ್ಬರೂ ಮಂಗಳೂರಿಗೇ ಹೋಗುವವರಲ್ವ. ಟ್ರೈನಿನಲ್ಲೊ ಬಸ್ಸಿನಲ್ಲೊ ಸಿಕ್ಕಿದಾಗ ಗುರ್ತದಲ್ಲಿ ಮಾತಾಡ್ತಾರೆ. ಅದರಲ್ಲಿ ಬಣ್ಣ ಕಟ್ಟಿಕ್ಕೆಂತ ಉಂಟು? ಈಗೆಲ್ಲ ಹುಡುಗ್ರು ಹುಡ್ಗೀರು ಮಾತಾಡುವುದೊಂದು ಸಂಗತಿಯಾ ಮಾರಾಯ್ರೆ?'**